doc-126
T-P-24

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂವುಟ 29 ಸಂಚಿಕೆ 170 | ಸೋಮವಾರ 18—3—46 | ಬೆಲೆ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಮನೋಲ್ಲಾಸವುಂಟು. ಆಪ್ತೇಷ್ಟರೊಂದಿಗೆ ಸಂತಸಲಹಾ ಪಗಳುಂಟು. ದೇಹಾರೋಗ್ಯವುಂಟು. ಧರ್ಮ ಕಾರ್ಯಗಳಲ್ಲಿ ಆಸಕ್ತಿಯುಂಟು.

ವೃಷಭ— ಆರೋಗ್ಯ ಸಾಧಾರಣ. ವ್ಯವಹಾರದಲ್ಲಿ ಸ್ವಲ್ಪ ತೊಂದರೆ, ವೃಥಾ ಕಾಲಹರಣ ಮಾಡಬೇಡಿ.

ಮಿಥುನ— ಮನೋ ದುರ್ಬಲತೆಯನ್ನು ದೂರಮಾಡಲು ಯತ್ನಿಸಿರಿ ಆರೋಗ್ಯವೇನೋ ಚನ್ನಾಗಿರುತ್ತದೆ. ವ್ಯವಹಾರದಲ್ಲಿ ಸ್ವಲ್ಪ ತೊಂದರೆ. ಆದಾಯವೂ ಚನ್ನಾಗಿರುತ್ತದೆ.

ಕರ್ಕಾಟಕ — ವ್ಯವಹಾರದಲ್ಲಿ ಜಾಗ್ರತೆಯಿಂದ ವರ್ತಿಸಿರಿ. ಇಲ್ಲದಿದ್ದಲ್ಲಿ ಕಷ್ಟವು ಸಂಭವಿಸಬಹುದು.

ಸಿಂಹ — ಮನಸ್ಸು ಆಹ್ಲಾದಕರವಾಗಿರುತ್ತದೆ ಆರೋಗ್ಯ ಲಾಭವೂ ಆರ್ಥಿಕ ಲಾಭವೂ ವ್ಯವಹಾರದಲ್ಲಿ ಕೀರ್ತಿಯೂ ಉಂಟು.

ಕನ್ಯಾ — ಶಾರೀರಿಕ ಮಾನಸಿಕ ಸಾಂಪತ್ತಿಕ ಸ್ಥಿತಿಗಳು ಉತ್ತಮವಾಗಿರುತ್ತವೆ. ವ್ಯವಹಾರದಲ್ಲಿ ಯಶಪ್ರಾಪ್ತಿ.

ತುಲಾ — ಮಾನಸಿಕ ಸ್ಥಿತಿಯು ಉತ್ತಮವಾಗಿರುತ್ತದೆ ಶರೀರವು ಉತ್ತಮವಾಗಿರತ್ತದೆ. ಆದಾಯವೂ ಉಂಟು.

ವೃಶ್ಚಿಕ — ಶರೀರಕ್ಕೆ ತೊಂದರೆ ತೊಂದರೆಯಾಗುವ ಸಂಭವವಿದೆ. ವ್ಯವಹಾರದಲ್ಲಿಯೂ ಕಷ್ಟವೂ ಕಾಣಬರುತ್ತದೆ.

ಧನಸ್ಸು — ಮನಸ್ಸು ಏನೇನೂ ಚನ್ನಾಗಿರುವುದಿಲ್ಲ. ಆರೋಗ್ಯವೂ ಹಾಗೆಯೇ ಇರುತ್ತದೆ. ವ್ಯವಹಾರದಲ್ಲಿ ದಲ್ಲಿ ಕೂಡಾ ಹರ್ಷವಿರುವುದಿಲ್ಲ.

ಮಕರ — ಆರ್ಥಿಕ ಲಾಭವುಂಟು. ಶರೀರ ಸ್ಥಿತಿ. ಉತ್ತಮವಿರುತ್ತದೆ ವ್ಯವಹಾರದಲ್ಲಿ ಸನ್ಮಾರ್ಗವು ದೊರೆಯುವುದು

ಕುಂಭ— ಲಾಭನಷ್ಟಗಳು ಸಮವಾಗಿರುವವು. ಆರೋಗ್ಯ ಪರವಾಯಿಲ್ಲ.

ಮೀನ— ಸುಸಾರ ಸಂಬಂಧ ವಿಚಾರಗಳನ್ನು ತಲೆಗೆ ಹಚ್ಚಿಕೊಂಡು ವ್ಯಥೆ ಪಡಬೇಡಿ.

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 64-0-0
ಚಿನ್ನ ತೊಲ 1 ಕ್ಕೆ	94-12-0
ಬೆಳ್ಳಿ	1-9-0

ಭಾರತಕ್ಕೆ ಬ್ರಿಟಿಷ್ ಮಂತ್ರಿ ನಿಯೋಗ

ಗಾಂಧೀಜೀಗೆ ಲಾರೆನ್ಸರ ವೈಯುಕ್ತಿಕ ಆಹ್ವಾನ !

ಬೊಂಬಾಯಿ, ಮಾ 16 — ಭಾರತಕ್ಕೆ ಆಗಮಿಸುವ ಬ್ರಿಟಿಷ್ ಮಂತ್ರಿ ಮಂಡಲ ನಿಯೋಗದೊಡನೆ, ಕಾಂಗ್ರೆಸ್ ಸಂವಾಗಿ ಸಂಧಾನ ನಡೆಸಲು ಅಧ್ಯಕ್ಷ ಆಜಾದರಿಗೆ ಸಂಪೂರ್ಣ ಅಧಿಕಾರವನ್ನು ವಹಿಸಿರುವುದಾಗಿ ಕಾಂಗ್ರೆಸ್ ಆವರಣದಲ್ಲಿ ಮಾತುಕತೆಗಳಾಗುತ್ತಿರುವುದಾಗಿಯು, ಪಿ. ಐ. ಎಶೇಷ ಪ್ರತಿನಿಧಿಗೆ ತಿಳಿದುಬಂದಿರುವುದಾಗಿ ಪ್ರಕಟವಾಗಿದೆ.

ಂ ಂ

ಪ್ರಾರಂಭದ ಮಾತುಕತೆಗಳು ನಡೆಯುವಿಕೆಗಾಗಿ ಮಾರ್ಚಿ ತಾ || 25 ರ ಹೊತ್ತಿಗೆ ಬ್ರಿಟಿಷ್ ಮಂತ್ರಿ ಮಂಡಲ ನಿಯೋಗವು ಅಧ್ಯಕ್ಷ ಆಜಾದರಿಗೆ ಸ್ವಾಗತ ಕೊಡುವುದಾಗಿ ತಿಳಿಯಬಂದಿದೆ. ಪ್ರಮುಖ ರಾಜಕೀಯ ವಿಚಾರ ಏನಿನಿಯಕ್ಕಾಗಿ ನುಹಾತ್ಮ ಗಾಂಧೀಜೀಯವರು ಭಾರತದ ಕಾರ್ಯದರ್ಶಿ ಲಾರ್ಡ್ ಪೆಥಿಕ್ ಲಾರೆನ್ಸರಿಂದ ವೈಯುಕ್ತಿಕವಾಗಿ ಆಹ್ವಾನಿಸಲ್ಪಡುವುದಾಗಿ ತಿಳಿಯಬಂದಿದೆ.

ಂ ಂ

ನವದೆಹಲಿ, ಮಾ 17 — ಮೈಸ್ರಾಯಿ ಲಾರ್ಡ್ ವೇವಲ್ಲರ ಅಳಿಯಂದಿರಾದ ಮೇಜರ್ ಅಸ್ಲೆಯವರು ಕ್ವೆಟ್ಟಾದಲ್ಲಿ ನೋಟಾರು ಆಪಘಾತದಲ್ಲಿ ಮಡಿದರೆಂದು ತಿಳಿಯಬಂದಿದೆ.

ಂ ಂ

ಸಂಧಾನ ನಡೆಸುವ ಕಾಲಾಕಾಲಗಳನ್ನು ಮುಖಂಡರು ಬಲ್ಲರೆಂದು ಹೇಳಲಾಗಿದೆ.

ಎಣ್ಣೆಯ ಹಕ್ಕಿನ ಸಂಬಂಧದ ಹೋದ್ದಾಟವೇ ರಷ್ಯಾ ಕಣ್ಣು ಪರ್ಷಿಯಾ ಮೇಲಿರುವುದಕ್ಕೆ ಕಾರಣವೆಂದು ಹೇಳಲಾಗಿದೆ. ಪರ್ಷಿಯಾ ರಷ್ಯಾಗಳಿಗಾದ 42 ರ ಒಪ್ಪಂದಕ್ಕೆ ವಿರುದ್ಧವಾಗಿ ಪರ್ಷಿಯಾ ಅತೀರಿಕ್ತಕ್ಕೆ ಎಣ್ಣೆ ಸೌಲಭ್ಯ ಕೊಡಲು ಹೊಟ್ಟುವ ನ್ಯಾಸೂದೆಯೇ ರಷಾ ಕಣ್ಣು ಕೆರಳಿಸಬೇಕೆಂದು ಹೇಳಲಾಗಿದೆ.

ಂ ಂ

ಟೆಹರಾನ್, ಮಾ 16 — ರಷ್ಯಾ ಸೈನ್ಯ ಟೆಹರಾನ್ ಬಾಗಿಲಿಗೆ ಬಂದಿರುವುದೆಂದು ಪದಂತಿ. ಇರಾನ್ ಮತ್ತು ಟರ್ಕಿ ವ್ಯಯದಿಂದ ಒಂದು ಕೂಟಾಕ್ಷ ಸಂಸ್ಥಾನವನ್ನು ಸ್ಥಾಪಿಸಬೇಕೆಂಬುದು ರಷ್ಯದ ಆಶಯವೆಂದು ಹೇಳಲಾಗಿದೆ.

ಂ ಂ

ನೆಲ್ಲೂರು, ಮಾ 17 — ನೆಲ್ಲೂರು ದೇವಾಲಯ ಗೌರ್ನಮೆಂಟ್ ಹರಿಜನರನ್ನು ದೇವಾಲಯಕ್ಕೆ ಬಿಡಲು ಒಪ್ಪಿರುವರು. ಪುತ್ತೂರು ಶ್ರೀರಾಮುಲು ಶೆಟ್ಟರು ಆಚರಿಸಿದ ಉಪವಾಸ ಪ್ರಭಾವವಿದು

ಂ ಂ

ನವದೆಹಲಿ, ಮಾ 16 — ಮೂವತ್ತಾರು ಸಾವಿರ ಟನ್ ಆಹಾರವು ಭಾರತಕ್ಕೆ ಬರುವದೆಂದು ಹೇಳಲಾಗಿದೆ.

ಂ ಂ

ಮದರಾಸು, ಮಾ 17 — ಕ್ಯಾ || ಲಕ್ಷ್ಮಿಯು ಬರುವ ಬುಧವಾರ ಇಲ್ಲಿಗೆ ಬರುವ ನಿರೀಕ್ಷಣೆಯಿದೆ.

ಡಿಗ್ರಿಗಳ ಮುಷ್ಕರನೇ ?

ಕನ್ನಂಬಾಡಿಯಿಂದ ಒಂದು ವಿಶೇಷ ಸುದ್ದಿ ಬಂದಿದೆ. ಅಲ್ಲಿ ಸುಮಾರು 20 ಮಂದಿ ವಿಶ್ವವಿದ್ಯಾನಿಲಯದ ಪದವೀಧರರಿರುವಂತೆ, ಅವರು 'ಡಿಗ್ರಿಗಳ ಸಂಘ' ಎಂಬುದಾಗಿ ಸಂಘವೊಂದನ್ನು ಕೆಲದಿನಗಳ ಹಿಂದೆ ಸ್ಥಾಪಿಸಿದರಂತೆ. ಡಿಗ್ರಿ ಪಡೆದವರಿಗೆ ತೀರಾ ಅಲ್ಪ ವೇತನ ದೊರೆಯುತ್ತಿರುವುದಾಗಿಯೂ, ಇತರರಿಗೆ ತನುಗಿಂತ ಹೆಚ್ಚು ವೇತನ ದೊರೆಯುತ್ತಿರುವುದೆಂದೂ, ಇದನ್ನು ಪ್ರತಿಭಟಿಸುವ ಸಲುವಾಗಿ ಈ ತಿಂಗಳ ಅಂತ್ಯದಿಂದ ಮುಷ್ಕರಹೂಡುವುದಾಗಿ ತಿಳಿಯಬಂದಿದೆ.

ಮ್ಯಾಜಿಸ್ಟ್ರೇಟರಿಗೆ ಮುತ್ತಿಗೆ

ಲಾಹೋರ್ನಾ ಜಿಲ್ಲೆಯ ಹೊಟೋಡೇರೋ ಪಟ್ಟಣದ ಮ್ಯಾಜಿಸ್ಟ್ರೇಟರಾದ ಮಿ || ಲೀಲಾರಾಮ ಎಂಬವರು ತಮ್ಮ ಸರ್ಕಾರಿ ನೌಕರನೊಂದಿಗೆ ಬಾಂಗುಲ-ದೇರೋಲ್ ರಸ್ತೆಗುಂಟ ತಿರುಗಾಡಲಿಕ್ಕೆ ಹೋದಾಗ ಕೆಲವು ದರೋಡೆಕೋರರು ಅವರನ್ನು ಮುತ್ತಿ ಮೈಮೇಲಿನ ಅರಿವೆಗಳನ್ನು ಕಸಿದುಕೊಂಡು ಹೊಡೆದು ಗಾಯಪಡಿಸಿದರಂತೆ. ಅವರು ಆಸ್ಪತ್ರೆಗೆ ದಾಕಲ್ಪಟ್ಟಿರುವರು. ಸರಕಾರಿ ನೌಕರನೂ ಕೂಡಾ ರೂ. 15 ಕಳಗೊಂಡಿರುವನಂತೆ.

ಹೊಟ್ಟೆಗಿಲ್ಲದೆ ಸಾವು

ಗ್ವಾಲ್ಹೇರ್ ಸಂಸ್ಥಾನದೊಳಗಿನ ಜವದ ಎಂಬಲ್ಲಿ ಅನ್ನ ಧಾನ್ಯ ಸಿಗುವುದು ಬಹಳ ಕಠಿಣವಾಗಿರುವುದರಿಂದ ಎಷ್ಟೋ ಜನರು ಹೊಟ್ಟೆಗಿಲ್ಲದೆ ಸಾಯುವ ಪ್ರಸಂಗ ಒದಗಿದೆ. ಅತಿ ಶ್ರೀಮಂತರು ಬಹಳ ತುಟ್ಟಿಯಿಂದ ಮತ್ತು ಇತರ ರೀತಿಯಿಂದ ಹೇಗೋ ಧಾನ್ಯ ದೊರೆಕಿಸುತ್ತಿದ್ದಾರೆ. ಆದರೆ ಬಡವರು ಮಾತ್ರ ಸಾಯುತ್ತಿದ್ದಾರೆ. ಇದರಲ್ಲಿ ಬಹು ಮಂದಿ ಕೂಲಿಗಾರರಿರುವರು.

Epilepsy & Hysteria

CURED FOR EVER

By smelling this wonderful herb when attacked by Fits, a black worm 1-1/4 " long will come with the sneeze of the patient. The patient will get a miracle cure of the diseases for ever. Apply in English to—

Shri 108 Mahatma Sidhbab
P. O. Nagod (Jubbulpore

. ನೂರೆಂಬರ್ಗ್, ಮಾ 8 — ಗೋರಿಂಗನನ್ನು ಹಿಟ್ಲರು 1943 ನೇ ವಸಂತ ಕಾಲದಲ್ಲಿ ದಸ್ತಗಿರಿ ಮಾಡಿಸಿದ್ದನೆಂಬ ವಿಚಾರ ಗೋರಿಂಗನ ವಿಚಾರಣೆಯಲ್ಲಿ ಹೊರಬಿದ್ದಿದೆ

ಕರಾಚಿ ಮಾ 15 — ಅಗಾಖಾನ ದಂಪತಿಗಳಿಗೆ ಪೌರಸಭೆ ಮಾನ ಪತ್ರವನ್ನರ್ಪಿಸಿತು.

ಮದರಾಸು ಮಾ 8— 2 ವರ್ಷದ ಕೆಳಗಿನ ಮಕ್ಕಳಿಗೂ, ಬಸರಿ ಬಾಣಂತಿಯರಿಗೆ ಉಚಿತವಾಗಿ ಹಾಲನ್ನು ಕೊಡಲು ಮದರಾಸು ಸರ್ಕಾರದವರು ಏರ್ಪಡಿಸುವವರಾಗಿದ್ದಾರೆ.

ಬೊಂಬಾಯಿ, ಮಾ 10 — ಅಮೇರಿಕಾದಿಂದ ಎರಡೂವರೆ ಸಾವಿರ ಟನ್ ಸೆಸ್ಸಿಲೆ ಒಂದಿದೆ.

॥ ವಂದೇಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ನುಮ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೂತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera

2 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

At Ranjit

From 10–3–46

Shirin Farad

— with —

RAGINI & JAYANT



ಹಸಕ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಬೆಲೆ ಡಬ್ಬಿ ೧ ಕ್ಕೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

ರಷ್ಯಾದಲ್ಲಿ ಇನ್ನು ರೇಷನ್ ಇಲ್ಲ

ಬೆಳೆಗಳು ಚೆನ್ನಾಗಿ ಬೆಳೆದಿರುವುದರಿಂದಲೂ, ರೇಷನಿಂಗ್ ಬಹಳ ಚಾಗರೂಕತೆಯೊಡನೆ ನಡೆಸಿದ್ದರಿಂದಲೂ ರಷ್ಯಾದಲ್ಲಿ ಪ್ರಜೆಗಳಿಗೆ ಸಾಕಾದಷ್ಟು ಆಹಾರವು ದಾಸ್ತಾನು ಮಾಡಲ್ಪಟ್ಟಿದೆ. ಆದುದರಿಂದ ಜಾಗ್ರತೆಯಲ್ಲಿ ರೇಷನ್ದಿಂಗು ತೆಗೆದುಹಾಕಲ್ಪಡುವುದೆಂದು ಸ್ಟಾಲಿನ್ನರು ಪ್ರಕಟಿಸಿರುವರಂತೆ! ಯುದ್ಧವು ಮುಗಿದುಹೋಗಿದ್ದರೂ ಭಾರತದೇಶದಲ್ಲಿ ಇನ್ನೂ ರೇಷನಿಂಗು ಪದ್ಧತಿಯು ಜಾರಿಯಲ್ಲಿರುವದೆಂದರೆ ಬ್ರಿಟಿಷ್ ಸರ್ಕಾರದ ವಿಧಾನವನ್ನು ಎಷ್ಟು ಮೆಚ್ಚಿಕೊಳ್ಳಬಹುದು!

(ದಿ)

ಗಾಂಧೀಜಿಯವರ ಆಕ್ರಂದನೆ

ಈಚಿಗೆ ಬೊಂಬೆಯಿನಲ್ಲಿ ನಡೆದ ನೌಕಾದಳದ ಸಿಬ್ಬಂದಿಯ ಚರ್ಯೆಯ ವಿಷಯದಲ್ಲಿ ಗಾಂಧೀಜಿಯವರು ಚಿಂತಿಸುತ್ತಾ 'ನನ್ನ ಅಹಿಂಸಾತತ್ವವನ್ನು ಬೊಂಬಾಯಿಯು ಸ್ವಲ್ಪವಾಟ್ಟಿಗೆ ಜೀರ್ಣಿಸಿಕೊಂಡಿರುವುದೆಂದು ತಿಳಿದುಕೊಂಡಿದ್ದೆನು. ನನ್ನ ಅಹಿಂಸಾತತ್ವಕ್ಕೆ ಬೊಂಬಾಯಿ ಸ್ಮಶಾನವಾಟಿಕೆಯಾಗಿ ಬದ್ಲಾಯಿಸುವುದೇ ಎಂದು ಆಕ್ರಂದಿಸುತ್ತಿರುವರು!

ಭಾರಿ ಈರುಳ್ಳಿ

ಕೆನಡಾದಲ್ಲಿ ಒಬ್ಬ ಭಾರತೀಯ ರೈತನು ಎರಡು ಪೌಂಡು ತೂಕವುಳ್ಳ ಈರುಳ್ಳಿಯನ್ನು ಬೆಳೆಸಿರುತ್ತಾನೆ. ಅದರ ಅಡ್ಡಳತೆ ಆರು ಅಂಗುಲ, ಎತ್ತರ ಮೂರು ಅಂಗುಲ.

.....

ಇದು ನಿಮಗೆ ಗೊತ್ತೇ

ವಿಕ್ಟೋರಿಯಾ ಮಹಾರಾಣಿಯವರು ರಾಜ್ಯಭಾರವನ್ನು ವಹಿಸಬೇಕಾಗಿರುವುದೆಂಬ ಮಾತನ್ನು ಕೇಳಿ ಕಣ್ಣೀರು ಸುರಿಸಿದರಂತೆ. ವ್ಯವಹಾರದಲ್ಲಿ ಪಕ್ಷಪಾತ, ತಿಳಿಯದೆ ಹೇಳುವಿಕೆ, ಇವು ಬ್ರಹ್ಮಹತ್ಯ ಪಾಪಕ್ಕೆ ಸಮಾನವಾದವುಗಳು. ಪುಣ್ಯಪಾಪಗಳಿಲ್ಲವೆಂದು ಬಾಯಿಯಲ್ಲಿ ಹೇಳಬಹುದಾಗಲೀ ಅನುಭವಿಸದೇ ತಪ್ಪಿಸಿಕೊಳ್ಳಲಾಗುವುದಿಲ್ಲ.

ಜಿ. ಐ. ಪಿ. ರೈಲ್ವೆ ಕೆಲಸಗಾರರ ಸಂಪು ಮುಂದುವರಿಯುತ್ತಿದೆ.

ಂ ಂ

ಕೇಪ್‌ಟೌನ್, ಮಾ 14 — ರಷ್ಯಾ ಯುದ್ಧಕ್ಕೆ ಹವಣಿಸಿಲ್ಲವೆಂದು : ಜ॥ ಸ್ಮಟ್ಸರ ಅಭಿಪ್ರಾಯವಾಗಿದೆ.

" ವಿಪರೀತತ್ವದಿಂದ ನನಗೆ ನೀವು ಏನು ಬೇಕಾದರೂ ಹೇಳಬಹುದು. ಹೃದಯದಲ್ಲಿ ಹೃದಯವನ್ನಿಟ್ಟು, ನೇತಾಜಿ ಸುಭಾಷ್ ಚಂದ್ರ ಬೋಸರು ಸಜೀವಿಗಳಾಗಿರುವುದಾಗಿ ನಾನು ಇನ್ನೂ ನಂಬುತ್ತೇನೆ " ಎಂಬುದಾಗಿ ಮಹಾತ್ಮ ಗಾಂಧೀಜಿಯವರು ಕ್ಯಾ॥ ಷಾ ನವಾಜ್‌ರವರ್ತು ಕ್ಯಾ॥ ಷೇಗಾಲರೊಡನೆ ಕಳೆದ ತಾ॥ 13 ರ ರಾತ್ರೆ ಸಂಭಾಷಿಸಿದಾಗ ತಿಳಿಸಿದರೆಂದು, ಕ್ಯಾ॥ ಷೇಗಾಲ ತನಗೆ ತಿಳಿಸಿದುದಾಗಿ ಯು. ಪಿ. ಐ. ಪ್ರತಿನಿಧಿ ತಿಳಿಸಿರುವರು.

ಕಾರ್ಪುರ ಮಾ 12— ಸಂಯುಕ್ತಪ್ರಾಂತ್ಯದ ಅಸೆಂಬ್ಲಿಯ ಚುನಾವಣೆ ಬಗ್ಗೆ ಪಾರ್ಟಿ ಗಲಭೆ ಹೊಡೆದಾಟವಾಗಿ ಪೋಲೀಸರ ಮಿಲಿಟರಿಯವರ ಆಗಮನವೂ ಗುಂಡುಹಾರಿಸುವಿಕೆಯೂ ನಡೆಯಿತೆಂದು ಹೇಳಲಾಗಿದೆ. 4 ಮಂದಿ ಸತರೆಂದೂ, 100 ಮಂದಿ ಗಾಯಗೊಂಡರೆಂದೂ ಹೇಳಲಾಗಿದೆ. ಪ್ರಂಡರು ಮಸೀದಿ ಗುರುದ್ವಾರಗಳಿಗೆ ಬೆಂಕಿ ಹತ್ತಿಸಿದರೆಂದು ವರದಿಯಾಗಿದೆ.

ಬೊಂಬಾಯಿ ಮಾ 12— ಗಾಂಧೀಜಿಯವರಿಗೆ ಬಂದಿದ್ದ ಬೆಳ್ಳಿ ಚರಕಾ ಲೋಟಾವನ್ನು ಹಂಚಾಜು ಹಾಕಲಾಗಿತಲಾ 250 ರೂ. ದೊರಕಿಸಿಕೊಟ್ಟವು.

ಲಂಡನ್ ಮಾ 13 — ಬ್ರಿಟನ್ನು ಇಟಲಿಗೆ ಸಾಲಾ ಕೊಡುವುದಿಲ್ಲವೆಂದೂ ನಗದು ವ್ಯಾಪಾರ ನಡೆಸಬೇಕೆಂದೂ ಹೇಳಲಾಗಿದೆ.

1946-47 ರಲ್ಲಿ ಆಟಂ ಪರಿಶೋಧನೆಗಾಗಿ ಬ್ರಿಟಿಷ್ ಸರಕಾರವು ಇಂಗ್ಲೆಂಡಿನಲ್ಲಿ ಮೂರು ಲಕ್ಷ ಪೌಂಡುಗಳನ್ನು ಖರ್ಚುಮಾಡಲಿರುವರು.

ಈಜಿಪ್ಟಿನಲ್ಲಿಯ ಗಲಾಟೆಗಳನ್ನು ಅಣಗಿಸಲು ಬ್ರಿಟನ್ನು ಸರ್ವ ಶಕ್ತಿಯನ್ನೂ ಉಪಯೋಗಿಸುವುದಂತೆ.

ಕಾಂಗ್ರೆಸ್ಸು 1937 ರಲ್ಲಿ ಇದ್ದ ಸ್ಥಿತಿಗಿಂತ ಇಂದು ಒಲಹೀನ ವಾಗಿದೆಯೆಂದು ಸರ್ ರಾಮಲಿಂಗ ರೆಡ್ಡಿಯವರುನುಡಿದಿರುವರು.

ಬೊಂಬಾಯಿ ಮಾ 12— ಸಧ್ಯದಲ್ಲೇ ಕಾಂಗ್ರೆಸ್ ಅಧಿವೇಶನ ನಡೆಯುವಂತಿಲ್ಲವೆಂದು ಪಟ್ಟಾ॥ ಅಜಾದರು ಹೇಳಿರುವರು.

ಲಂಡನ್ ಮಾ 12— ಮಂತ್ರಿಮಂಡಲದ ನಿಯೋಗವು ಮುಂದಿನ ಮಂಗಳವಾರ ಭಾರತಕ್ಕೆ ಹಾರಿಬರುವುದೆಂದು ಹೇಳಲಾಗಿದೆ.

ಡೆಲ್ಲಿ, ಮಾ 12 — ಈಚಿಗೆ ನಡೆದ ಗಲಭೆಗಳಿಂದ ಇಲ್ಡಿಯ ಮುನಿಸಿಪಾಲಿಟಿಗೆ ಆರು ಲಕ್ಷ ರೂ, ನಷ್ಟವಾಗಿದೆ.

ಲಂಡನ್, ಮಾ 12 — ಚರ್ಚಿಲ್ಲರ ಭಾಷಣವು ಬ್ರಿಟಿಗೂ ಅಮೇರಿಕ ರಷ್ಯಾ ಸ್ನೇಹ ಭಾವಕ್ಕೂ ಪ್ರಪಂಚ ಶಾಂತಿಗೂ ಭಂಗತರುವಂತಿದೆಯೆಂಬ ತರವನ್ನು 26 ಲೇಬರ ಮೆಂಬರುಗಳು ಕಾಮನ್ಸ್ ಸಭೆಗೆ ಕಳುಹಿಸಿರುವರು.

ಬಟಾವಿಯಾ ಮಾ 10 — ಇಂಡೊನೇಷಿಯಾ ಪ್ರಧಾನಿ ಡಾ॥ ಹೆರಿಯಂರರು ಬಟಾವಿಯಾದಲ್ಲಿ ಡಚ್ ಸೇನಿಕರನ್ನು ಇಳಿಸಿರುವುದನ್ನು ಕುರಿತು ಉತ್ತರ ಅಧಿಕಾರಿಗಳಿಗೆ ಖಂಡನಾ ಪತ್ರ ಬರೆದಿರುವರು.

ಮುಂಬಯಿ, ಮಾ 10 — ಒಂದು ಲಕ್ಷ ಜನರು ಶ್ರೀ ಆಗಾಖಾನರ ವಜ್ರೋತ್ಸವನವನ್ನು ಪ್ರೇಕ್ಷಿಸಲುಬ್ರೆಬೋರ್ನ್ ಸ್ಟೇಡಿಯಂನಲ್ಲಿ ಸೇರಿದ್ದರು ಅವರು ಇನ್ನೂರು ನಲ್ಲಿ ತುಂಬಿರುವರೆ ಪೌಂಡು ತೂಗಿದರು. ಆ ತೂಕದ್ದು 90 ಲಕ್ಷ ರೂ. ಬೆಲೆ ಬಾಳುವುವು. ಗಾಂಧೀಜೀ ಅವರಿಗೆ ಚಿಂಕಾಲ ಬದುಕಿರೆಂದು ಸಂದೇಶ ಕಳುಹಿಸಿರುವರು.

ಖೈರ್ ಸಂಸ್ಥಾನದ ದೇವಾಲಯವನ್ನು ಹರಿಜನರಿಗೆ ತೆಗೆಯಲಾಯಿತು.

ಸರ್ ಸಿ. ಪಿ. ಯವರ ವಿರುದ್ಧ ವ್ರದರ್ಶನ

ಎರ್ನಾಕುಲಂ— ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ಯವರ ವಿರುದ್ಧ ಪ್ರದರ್ಶನವನ್ನು ಕೊಚ್ಚಿ ವಿದ್ಯಾರ್ಥಿಗಳು ನಡೆಸಿದುದಕ್ಕಾಗಿ ಅವರಿಗೂ ಪೋಲೀಸರಿಗೂ ಘರ್ಷಣೆಯಾಗಿ 20 ಮಂದಿಗೆ ಜಖಂ ಆಗಿದೆ.

ಂ ಂ

ಸಮ್ಮೇಳನ

ಮೈಸೂರು ಮಾ 14— ಮೈಸೂರು ಡಿಸ್ಟ್ರಿಕ್ಟ್ ಸಮ್ಮೇಳನವು ಈ ತಿಂಗಳು ತಾ॥ 19-20 ರಲ್ಲಿ ನಡೆಯುವುದು,

ಂ ಂ

ಉಚಿತ ಪಾಕಶಾಲೆ

ಬೆಂಗಳೂರು ಮಾ 13— ಮೈಸೂರು ಸರಕಾರದವರು ಚಿತ್ರದುರ್ಗ ಡಿ॥ ತುಮಕೂರು ಡಿ॥ ಮತ್ತು ಕೋಲಾರ ತಾಲ್ಲೂಕುಗಳಲ್ಲಿ ಉಚಿತ ಪಾಕಶಾಲೆಗಳ ತೆರೆಯುವುದನ್ನು ಒಪ್ಪಿರುವರು.

ರಷ್ಯಾ ವಿಚಾರದಲ್ಲಿ

ರಷ್ಯಾದವರಿಗೆ ಆಟಂಬಾಂಬಿನ ರಹಸ್ಯವು ತಿಳಿದಲ್ಲಿ ಅಪಾಯಕರವೆಂದು ಚರ್ಚಿಲ್ಲರು ಹೇಳುತ್ತಿರುವರು. ಸ್ಟಾಲಿನ್ನರನ್ನು ಲಂಡನ್ನಿಗೆ ಬರಮಾಡಿಕೊಳ್ಳಕೂಡದೇ ಎಂಬ ಪ್ರಶ್ನೆಗೆ ಆಟ್ಲಿಯವರು ' ಆಗುವುದಿಲ್ಲ ' ಎನ್ನುತ್ತಿದ್ದಾರೆ.

ಂ ಂ

ಸಿಲ್‌ಹಟ್ಟಿನ ವರ್ತಮಾನ

ಎರಡು ಹುಲಿಗಳು ಒಂದು ಹಸುವನ್ನು ತಿನ್ನಲು ಹೋರಾಡಿ ಗ್ರಾಮಕಂಠದಲ್ಲಿಯೇ ಒಂದು ಹುಲಿಯು ಸತ್ತಿತು. ಎರಡನೆಯದು ಹಸುವನ್ನು ತೆಗೆದುಕೊಂಡು ಹೋಗಿ ತಿಂದುಹಾಕಿತು.

ಂ ಂ

ಪಂ ॥ನೆಹರುರವರ ಅಭಿಪ್ರಾಯ

" ಇಂಡಿಯಾ ಸ್ವತಂತ್ರದೇಶವೆಂದು ಆಂಗೀಕರಿಸಲು ಬ್ರಿಟನ್ನು ನಿಶ್ಚಯಮಾಡಿಕೊಳ್ಳಬೇಕು. ತನ್ನ ರಾಜ್ಯಾಂಗವ್ಯವಸ್ಥೆಯನ್ನು ನಿರ್ಮಿಸಿಕೊಳ್ಳುವ ಪೂರ್ಣಾಧಿಕಾರದೊಂದಿಗೆ ಸಭೆಯನ್ನೇರ್ಪಡಿಸಬೇಕೆಂದು ನೇಷ್ ಪ್ರತಿನಿಧಿಗೆ ಪಂ ॥ ನೆಹರು ತಿಳಿಸಿದರು.

ಪ್ರತೀಕಾರ

ನವ ದೆಹಲಿ ಮಾ 12— ದಕ್ಷಿಣ ಆಫ್ರಿಕಾದಲ್ಲಿ ಜಾರಿಗೆತರಲ್ಪಟ್ಟಿರುವ ಭಾರತ ವಿರುದ್ಧ ಪ್ರಸೂದೆಗೆ ಪ್ರತೀಕಾರವಾಗಿ ಭಾರತ ಸರಕಾರವು ದಕ್ಷಿಣ ಆಫ್ರಿಕಾದೊಡನೆ ಇರುವ ಭಾರತದ ವ್ಯಾಪಾರದ ಒಪ್ಪಂದವನ್ನು ಮುಕ್ತಾಯ ಗೊಳಿಸಲು ನಿರ್ಧರಿಸಿದೆ. ಈ ಬಗ್ಗೆ ಭಾರತದ ಹೈ ಕಮಿಷನರ ಮೂಲಕ ನೋಟೀಸು ಸಲ್ಲಿಸಲಾಗಿದೆ.

ಪ್ರಪಂಚದಲ್ಲಿನ ಹೆಚ್ಚು ಆಸ್ತಿವಂತರು

ಪ್ರಪಂಚದ ಆಸ್ತಿವಂತರೆಲ್ಲಾ ಹೈದರಾಬಾದಿನ ನೈಜಾಮರಿಗೇ ಅಗ್ರ ಸ್ಥಾನ. ಅವರಲ್ಲಿರುವ ಕೇವಲ ವಜ್ರಗಳ ಬೆಲೆಯೇ ಕನಿಷ್ಠ 400 ಕೋಟಿ ರೂ. ಗಳಾಗುವುದಂತೆ! ಅಪೂರ್ವವಾದ ಚಿನ್ನದ ಭಂಡಾರವಂತೆ! ಅದರಲ್ಲೊಂದು ಮೇಜು 150 ಜನ ಅತಿಥಿಗಳ ಆತಿಥ್ಯಕ್ಕೆ ಆಗುವುದಂತೆ; ಅವರ ಸ್ವಂತ ಆದಾಯ 4 ಕೋಟಿಯಷ್ಟಿದ್ದರೂ ತನಗಾಗಿ ಅವರು ಖರ್ಚು ಮಾಡುವುದು ತಿಂಗಳಿಗೆ ಕೇವಲ 65 ರೂ. ಮಾತ್ರವಂತೆ ಅವರ ಮನೆಯ ವೆಚ್ಚವೆಲ್ಲವನ್ನೂ ರಾಜ್ಯವೇ ನಿಭಿಸಿಕೊಳ್ಳುವುದು.

ವಿಜಯದಿನವಾದ ಮೇಲೆ ನೈಜಾಮರ ಬಗ್ಗೆ ನಾವೀಗ ಹೀಗೆ ಹೇಳಬಹುದಾದರೂ ಅದಕ್ಕೆ ಮುಂಚೆ ಜಪಾನು ಚಕ್ರವರ್ತಿಯಾದ ಹಿರೋಹಿಟೋ ಎಂಬವನೆ ವಿಶ್ವದ ಪ್ರಖ್ಯಾತ ಶ್ರೀಮಂತನಾಗಿದ್ದ.

'ಸ್ವರ್ಗ ಸುಖ' ಎಂಬ ಅಭಿಧಾನ ವಿರುವ ಈತನಿಗೆ ಎಷ್ಟು ಆಸ್ತಿ ಇತ್ತೆಂದರೆ, ಅದರಿಂದ ಅತನಿಗೆ ಬರುತ್ತಿದ್ದ ವಾರ್ಷಿಕ ಆದಾಯ (ಸ್ವಂತ) 32 ಕೋಟಿ ರೂ. ಈ ಆದಾಯಕ್ಕೆ ತೆರಿಗೆ ಕೊಡಬೇಕಾಗಿರಲಿಲ್ಲ. ಜಪಾನಿನ ಅರಣ್ಯ ಸಂಪತ್ತೆಲ್ಲಾ ಈತನದೇ. ಟೋಕಿಯೊ ವಿನ ವಾಣಿಜ್ಯ ಕ್ಷೇತ್ರವೆಲ್ಲಾ ಇವನದು. ಜಪಾನು ವ್ಯಾಪಾರದಲ್ಲಿ ಅನೇಕ ಭಾಗ ಇವನಿಗೆ ಸೇರಿತ್ತು. ಕೂತಿದ್ದರೂ ವಾರಕ್ಕೆ ಇವನಿಗೆ 65 ಲಕ್ಷ ರೂ. ಆದಾಯ ಬರುತ್ತಿದ್ದರೂ ಇವನದು ಬಹಳ ಸಾದಾ ರೀತಿ. ಅವನ ಕೈ ಗಡಿಯಾರ ಕೇವಲ 10 ರೂಪಾಯಿನದು. (ಪೌ)

ವೈತ್ತಾಂತ ಸಂಗ್ರಹ

ಪಂಜಾಬಿನಲ್ಲಿ ವಿಶ್ರಮಂತ್ರಿ ಮಂಡಲ ಸ್ಥಾಪನೆಯಾಯಿತೆಂದು ಸರ್ಕಾರಿ ಪ್ರಕಟನೆ ತೀಸುತ್ತದೆ.

ಮಹಾ ಚುನಾವಣೆಗಳನ್ನು ಮುಂದುವರಿಸಬೇಕೆಂದು ಸೂಚಿಸಿ ಗ್ರೀಸಿನ ಹತ್ತು ಮಂದಿ ಮಂತ್ರಿಗಳು ರಾಜೀನಾಮೆ ಇತ್ತಿದ್ದಾರೆ.

ಭಾರತ ರಾಷ್ಟ್ರೀಯ ಸೇನೆಯ ಮೇ॥ ಜ॥ ಚಟರ್ಜಿಯವರನ್ನು ಕಲ್ಕತ್ತಾಕ್ಕೆ ಕರೆತಂದು ವಿಹಲಿಗೆ ಕರೆದೊಯ್ಯಲಾಯಿತೆಂದು ಗೊತ್ತಾಗಿದೆ.

ಮುಂಬಯಿಯ ಗಲಭೆಯಲ್ಲಿ ಪೋಲಿಸರು ಹುಷಾರಿನಿಂದ ವರ್ತಿಸಿದರೆಂದು ವೈಸ್ರಾಯರು ಭಾರತ ಕಛೇರಿಗೆ ವರದಿ ಮಾಡಿರುವರು.

ಭಾರತಕ್ಕೆ ವ್ಯವಸಾಯ ನಿಯೋಗವನ್ನು ಕಳುಹಿಸಲು ಅಮೇರಿಕಾ ಯೋಚಿಸುತ್ತಿದೆ.

ಸ್ಪೇನಿನ ಹಲವು ವಿದೇಶಿಗರ್ಥಗಳು ಫ್ರಾನ್ಸಿನ ವಿರುದ್ಧ ಮೇಡ್ರಿಡ್‌ನಲ್ಲಿ ನಡೆಸಿದ ಪ್ರದರ್ಶನವನ್ನು ಪೋಲೀಸರು ಚದುರಿಸಿದರು.

ಕ್ವೆಟ್ಟಾ ಮಾ 11— ಬೆಲೂಚಿಸ್ಥಾನದಲ್ಲಿ ಎಪ್ರಿಟಿಂಗುಗಳು ನಡೆಸಲ್ಪಡದಂತೆ ಪ್ರತಿಬಂಧಕಾಜ್ಞೆ ಹೊರಡಿಸಲಾಗಿದೆ.

ಈ ತಿಂಗಳ ಕೊನೆಯಲ್ಲಿ ದಿವಾನರಾದ ಶ್ರೀ ಮಾಧವರಾಯರು ಅಮೇರಿಕಾದಿಂದ ಮೈಸೂರಿಗೆ ಬಿಗುಸುವರು.

ಮೈಸೂರು ಸಂಸ್ಥಾನದ ಯಾವ ಉಪಹಾರ ಮಂದಿರಗಳಲ್ಲೂ ಹಾಲಿನಿಂದ ಪದಾರ್ಥಗಳನ್ನು ತಯಾರಿಸಕೂಡದೆಂದು ಮೈಸೂರು ಸರ್ಕಾರದ ಆಜ್ಞೆಯಾಗಿದೆ.

ವಿಶ್ವ ಛಪ್ರತಾ ಸಮ್ಮೇಳನದ ಮುಂದೆ ಸ್ಪೇಷ್ ಪ್ರಶ್ನೆ ಕೂಡದೆಂದು ಅಮೇರಿಕಾ ಫ್ರಾಕ್ಸ್ ಸಲಹೆಗೆ ಉತ್ತರವಿತ್ತಿದೆ.

ಕೈರೊ, ಮಾ 10 — ಸಿನಿಮಾವಂದಿರಪ್ಪೊಂದರಲ್ಲಿ ಬಾಂಬು ಸಿಡಿದ ಪರಿಣಾಮವಾಗಿ 20 ಗಾಯ 1 ಸಾವಾಗಿದೆ.

ಭಾರತೀಯರೇ ಸಂಘಟಿತರಾಗಿ

ಬ್ರಿಟನ್ನಿಗೆ ಭಾರತವೆಂಬುದು ಚಿನ್ನದ ಮೊಟ್ಟೆಯಿಡುವ ಭಾತು ಕೋಳಿಯಂತಾಗಿ ಬಿಟ್ಟಿದೆ. ದ್ವಿತೀಯ ಜಾಗತಿಕ ಸಂಗ್ರಾಮದ ನಂತರ ಬ್ರಿಟೈನು 3 ನೇ ತರಗತಿಯ ಶಕ್ತಿಯಾಗಿ ಬಿಟ್ಟಿದೆ ಬ್ರಿಟೈನಿನ ಕಾರ್ಖಾನೆಗಳು ಬಾಂಬಿಗಾಹುತಿಯಾಗಿ ನಾಶವಾದುವು. ಆದುದರಿಂದ ಈ ಸಂದರ್ಭದಲ್ಲಿ ಪ್ರಬಿಷರು ತಾವಾಗಿ ಭಾರತ ಕೊಡೆಯುವುದಾದರೂ ಹೇಗೆ? ಬ್ರಿಟಿಷರು ಭಾರತದಲ್ಲಿರುವವರೆಗೆ ಭಾರತವು ಗುಲಾಮಸ್ಥಾನವಾಗಿಯೇ ಉಳಿಯುವುದು. ನಮಗೆ ಪಾಕೀಸ್ತಾನ, ಪಾಕೀಸ್ತಾನ, ಕ್ರೈಸ್ತಸ್ಥಾನ ಇವು ಯಾವುದು ಬೇಕಾಗಿದ್ದರೂ ಮೊದಲು ಭಾರತೀಯರು ಸಂಘಟಿತರಾಗಿ ಬ್ರಿಟಿಷರನ್ನು ಓಡಿಸಬೇಕೆಂಬುದಾಗಿ ಕೇ॥ ಷಾ ನವಾಜರು ಹೇಳಿದ್ದಾರೆ.

ಲಕ್ಕವಳ್ಳಿ ಜಲಾಶಯ

ಶಿವನೊಗ್ಗ ಮಾ 7 — ಭದ್ರಾ ನದಿಯ ಮೇಲೆ ಲಕ್ಕವಳ್ಳಿ ಅಣೆಕಟ್ಟನ್ನು ಕಟ್ಟುವ ಕೆಲಸವು ನಿರಾಮತ್ ಸಚಿವರಾದ ಶ್ರೀ ಸಿದ್ದಪ್ಪನವರು ತಾ॥ 19 ರಲ್ಲಿ ಇನ್‌ಸ್ಪೆಕ್ಷನ್ ಮಾಡಿದನಂತರ ಪ್ರಾರಂಭವಾಗುವೆಂದು ತಿಳಿಯಬಂದಿದೆ.

ಎಲೆಕ್ಟ್ರಿಕ್ ಟ್ರಾಲಿ ಸರ್ವಿಸ್

ಬೆಂಗಳೂರು ಮಾ 11— 50 ಲಕ್ಷ ರೂಪಾಯಿ ವ್ಯಯದಿಂದ ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಟ್ರಾಲಿ ಬಸ್ ಸರ್ವಿಸ್ಸನ್ನು ಪ್ರಾರಂಭಿಸುವ ಯೋಜನೆಯನ್ನು ಟ್ರಾನ್ಸ್‌ಪೋರ್ಟ್ ಕಮಿಟಿಯವರು ಅನುಮೋದಿಸಿದಾರೆ.

ಮುಖ್ಯಸೈನ್ಯಾಧಿಕಾರಿ ಕಾರ್ಯದರ್ಶಿ

ನವದೆಹಲಿ ಮಾ 11— ಭಾರತದ ಮುಖ್ಯ ಸೇನಾಧಿಪತಿಗೆ ಅಪ್ತ ಕಾರ್ಯದರ್ಶಿಗಳಾಗಿ ಲೆ॥ ಕ॥ ಹಮೀದ್‌ರವರು ನೇಮಿಸಲ್ಪಟ್ಟಿರುವರು ಈ ಹುದ್ದೆಗೆ ಭಾರತೀಯರೊಬ್ಬರನ್ನು ನೇಮಿಸಿದ್ದು ಇದೇ ಮೊದಲು.

ಉಪಾಧ್ಯಾಯರ ಮುಷ್ಕರ

ಕಾರವಾರ ಮಾ 11— ಈ ಡಿಸ್ಟ್ರಿಕ್ಟಿನ 91 ಪ್ರಾಥಶಾಲೆಗಳಲ್ಲಿನ ಉಪಾಧ್ಯಾಯರು ಮುಷ್ಕರ ಹಿಡಿದಿರುವರು

ಏಸು ಕ್ರಿಸ್ತ

ಏಸು ಕ್ರಿಸ್ತನು ಭಾರತ ಭೂಮಿಯಲ್ಲಿ ಕಾಶ್ಮೀರದ ಶ್ರೀನಗರದ ಖಾನ್ಯಾರ್ ಬೀದಿಯಲ್ಲಿ ಇರುವನೆಂದೂ ಲಂಡನ್ ಪುಟ್ನೀ ಮಹಿಳೆಯು ಇವಾಂ ಪಾಮಾರವರು ಹೇಳಿರುವುದಾಗಿ ಪ್ರಕಟವಾಗಿದೆ.

ಬೊಂಬಾಯಿ ದುರಂತ

ಲಂಡನ್, ತಾ 6

"ಬೊಂಬಾಯಿನಲ್ಲಿ ನಿರಪರಾಧಿ ನಿಶ್ಶಸ್ತ್ರ ಹಿಂದೀಯರ ಮೇಲೆ ಗುಂಡು ಹಾರಿಸುವುದನ್ನು ಕಳೆದ ಫೆಬ್ರವರಿ 22 ನೇ ತಾರೀಖು ನಡೆದ ಘಟನೆ ವಿವರಿಸುವೆ. ಪಟೇಲರಲ್ಲಿ ನಾನು ನಡೆದುಕೊಂಡೇ ಹೋಗುತ್ತಿದ್ದೆ. ರಸ್ತೆಯಲ್ಲಿ ಜನರೇಕವಿದ್ದರು. ಪುಂಡರೂ ಆಗಿರಲಿಲ್ಲ. ಅಷ್ಟರಲ್ಲೇ ಒಂದು ಬ್ರಿಟಿಷ್ ವಾಹನವು ಬಂದಿತು. ಅದರಲ್ಲಿದ್ದ ಬ್ರಿಟಿಷ್ ಸೈನಿಕರು ಬಂದೂಕು ಮತ್ತು ಬ್ರೆಗನ್ ತೋಪುಗಳಿಂದ ಜನರ ಮೇಲೆ ಗುಂಡು ಹಾರಿಸಿದರು. ಜನರು ಮನೆಗಳ ಕಡೆ ಓಡಲಾರಂಭಿಸಿದೊಡನೆ ಸೈನಿಕರು ಆಶ್ರ ಬಂದೂಕಗಳನ್ನು ತಿರುಗಿಸಿ ಗುಂಡೆಸೆದರು."

ಈ ರೀತಿ ಮಾಡಲು ಕಾರಣವೇನು?

"ಈ ಹಿಂದೀ ನಾಯಿಗಳಿಗೆ ಪಾಠ ಕಲಿಸಲು ಉಚ್ಚ ಅಧಿಕಾರಿಗಳೊಬ್ಬರು ನಿರ್ಧರಿಸಿದ್ದರು. ರಣರಂಗಕ್ಕೆ ತೆರಳುವಂತೆ ಸೈನಿಕರು ಮೋಟಾರುಗಳಲ್ಲಿ ಓಡಾಡಿ ಜನರನ್ನು ಕಂಡಕಂಡಲ್ಲಿ ಗುಂಡಿಸೆದರು. ವೆಲ್ಲಸ್ಲಿ ರಸ್ತೆಯಲ್ಲಿ ಸೈನಿಕರು ಬಡಬಗ್ಗರ ಗುಡಿಸಲುಗಳಿಗೆ ನುಗ್ಗಿ ಗುಂಡೆಸೆದರು."

"ಮುಷ್ಕ ಹೂಡಿದ ನಾವಿಕರು ಕೇಸಲ್ ದೇರೆಕುಗಳಿಗೆ ಹಿಂತಿರುಗುವಂತೆ ಅಧಿಕಾರಿಗಳು ಆಜ್ಞಾಪಿಸಿದ್ದರು. ಆರು ಹಾಗೆ ಬಂದ ಬಳಿಕ ಸೈನಿಕರು ಅವರನ್ನು ಸುತ್ತುಗಟ್ಟಿ ಅನ್ನ ನೀರು ಕೂಡಾ ಅವರಿಗೆ ಕೊಡಲಿಲ್ಲ. ನೀರಿಗಾಗಿ ಅವರು ಹೊರಗೆ ಬಂದೊಡನೆ ಅವರ ಮೇಲೆ ಗುಂಡೆಸೆದರು. ಬ್ರಿಟಿಷ್ ಸೈನಿಕರು ಮತ್ತು ಅಧಿಕಾರಿಗಳೇ ಈ ಸಲ ಗುಂಡು ಹಾರಿಸಿದ್ದಾರೆ."

"ಪುಂಡರು ಹಿಂಸಾಚಾರ ನಡೆಸಿದರೆಂದು ಹೇಳಲಾಗುತ್ತದೆ. ಆದರೆ ಸೈನಿಕರು ಬಹಳ ವೇಗದಿಂದ ಮೋಟಾರ್ ಓಡಿಸಿ, ಶಾಂತಿಯಿಂದಿದ್ದ ಜನರ ಮೇಲೆ ಗುಂಡೆಸೆದು ಇಬ್ಬರನ್ನು ಕೊಂದರು. ಆದುದರಿಂದಲೇ ಕೆಲವರು ರೇಗಿ ಒಂದೆರಡು ಕಲ್ಲೆಸೆದರು."

ಹಿಂದೀ ರಾಜದ್ರೋಹಿಯು ಬರೆದು ದಿಲ್ಲ ಇದು. ಬ್ರಿಟಿಷ್ ಸೈನ್ಯಾಧಿಕಾರಿಯೊಬ್ಬನು ಪ್ರತ್ಯಕ್ಷ ಕಂಡು ಪ್ರಕಟಿಸಿದುದು. ದಬ್ಬಾಳಿಕೆಯಿಂದಲೇ ನೆಲೆನಿಂತಿರುವ ಬ್ರಿಟಿಷ್ ಸಾಮ್ರಾಜ್ಯವು ನಶಿಸಿ ಹೋಗುವ ಮೊದಲಿನ ಅಪ್ಪೆರಿಯು ರುದ್ರನೋಟವಿದು (ನ. ಭಾ)